ವಸ್ತು ರಾಮನ ಕತ್ತಿನದೇ ಆದರೂ ನನಗೆ ಬೇಡ.'

ಆ ಏಕಾಗ್ರಚಿತ್ರಕ್ಕೆ ಮತ್ತೊಂದು ಹೇಗೆ ರುಚಿಸಬೇಕು? ಬಯಸಬಹುದಾದ ಅಖಂಡಸೌಂದರ್ಯ, ಸಮಸ್ತ ಸಂತೋಷ ಅಲ್ಲೇ ಹೆಪ್ಪುಗಟ್ಟಿರುವಾಗ ಉಳಿದುದು ಹೇಗೆ ಅದಕ್ಕೆ ಒಗ್ಗೀತು? ತುಲಸೀದಾಸ ರಾಮಭಕ್ತ. ಅವನಿಗೆ ಕೃಷ್ಣನ ವಿಗ್ರಹದಲ್ಲೂ ಕೂಡ ರಾಮನೇ ಕಾಣುತ್ತಿದ್ದನಂತೆ. ಗಾಂಧೀಜಿಯ ತಾಪಸಜೀವನದಲ್ಲಿ ಇಂಥ ವಿಲಕ್ಷಣ ಅನುಭವವೊಂದು ಕಾಣಬರುತ್ತದೆ. ತಮ್ಮ ನಿಷ್ಠೆಗೆ ನಿಯಮಕ್ಕೆ ಹೊಂದಬಹುದಾದುದೇ ಅವರಿಗೆ ಸತ್ಯ. ಆ ಸತ್ಯವೇ ಸೊಗಸು. ಒಮ್ಮೆ ಗಾಂಧೀಜಿ ಹೇಳಿದರು: 'ನನಗೆ ದೇವರನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬಾಶೆಯಿದೆ. ಸತ್ಯದ ಮೂಲಕ ಅಹಿಂಸೆಯನ್ನು ಸಾಧಿಸುವ ಬಯಕೆಯಿದೆ. ಸತ್ಯವಲ್ಲದ ಮಾರ್ಗದಿಂದ ಅಹಿಂಸೆಯನ್ನು ಸಾಧಿಸುವ ಉಪಾಯ ಇದ್ದರೂ ನನಗೆ ಬೇಡ. ನಾನು ದೇವರನ್ನು ಕಾಣಲಾಶಿಸುತ್ತೇನೆ. ನನ್ನ ದಾರಿಯಲ್ಲಿ ನನಗೆ ದೇವರು ಕಾಣುವುದಾದರೆ ಕಾಣಲಿ. ದೇವರಿಗೆ ಮನಸೊಪ್ಪಿದ ಬೆಲೆ ಕೊಡಬೇಕೆಂದರೆ ನಾನು ಆ ದೇವರನ್ನೇ ನೋಡುವುದಿಲ್ಲ. ನಾನು ಕಟ್ಟುವ ಬೆಲೆಗೆ ದೇವರು ಸಿಗಲಿ, ಅವನ ಬೆಲೆಗಲ್ಲ. ಹಾಗೆಲ್ಲಾ ಚೌಕಾಸಿ ಮಾಡಿದರೆ ಆ ಬೆಡಗಿಗೆ ನಾನು ಮನಸೋಲುವುದಿಲ್ಲ. ಸತ್ಯವಲ್ಲದ ಉಪಾಯದಿಂದ ದೇವರು ಕಾಣಬರುವುದಾದರೆ ನನಗೆ ಆ ಉಪಾಯವೂ ಬೇಡ, ಆ ದೇವರೂ ಬೇಡ. ಇದಿರಿಗೆ ಬಂದರೂ ನಾನು ನೋಡಲಿಕ್ಕಿಲ್ಲ. ನನ್ನ ಬೆಲೆ, ನನ್ನ ಹಾದಿ- ಕಂಡು ಬಂದರೆ ಬರಲಿ, ಇಲ್ಲದಿದ್ದರೆ ಬಿಡಲಿ. ದೇವರು ಕಟ್ಟಿದ ಬೆಲೆಗೆ ನನಗೆ ಮೋಕ್ಷ ಬೇಕಾಗಿಲ್ಲ, ನಾನು ಕಟ್ಟಿದ ಬೆಲೆಗೆ ಪಡೆದರೆ ಸರಿ'. ಬರಬಾರದ ವೇಷದಲ್ಲಿ ಬಂದರೆ ದೇವರಿಗೂ ಅಲ್ಲಿ ಒಳಗೆ ಬರಲು ಅಪ್ಪಣೆಯಿಲ್ಲ. ಪರ್ಣಕುಟಿಗೆ ಬರಬೇಕಾದರೆ ದೇವರಾದರೂ ಖಾದಿ ತೊಟ್ಟು ಬರಬೇಕು. ತಾನು ದೇವರೆಂದು ಹೇಳಿ ಬರಬೇಕು. ವೇಷ ಮರೆಯಿಸಿ ಬರುವ ಅಸತ್ಯಕ್ಕೆ ಅಲ್ಲಿ ಮನ್ನಣೆಯಿಲ್ಲ. ಗರುಡಗರ್ವಭಂಗದಲ್ಲಿ ಕೃಷ್ಣನ ಹೆಸರನ್ನು ಹೇಳಿದರೆ ಆಂಜನೇಯ 'ಯಾರೋ ಗೊತ್ತಿಲ್ಲ ಹೋಗು!' ಎಂದನಂತೆ, ರಾಮನ ಹೆಸರು ಹೇಳಿದರೆ ಆಗ ಹದಕ್ಕೆ ಬಂದನಂತೆ. ಏಕಾಂತಭಕ್ತಿಯ ಏಕಾಗ್ರನಿಷ್ಠೆಯ ಪರಿಪಾಕ ಅದು.

ಗಾಂಧೀಜಿ ಒಮ್ಮೆ ಸೀತೆಯ ಚೆಲುವನ್ನು ವಿಮರ್ಶಿಸಿದರು. ಅದು ಹೆಂಗಸರ ಸಭೆ: 'ನಿಮ್ಮ ಹಾಗೆ ಒಡವೆ ವಸ್ತು ಮೈತುಂಬಾ ಹೇರಿಕೊಂಡಿದ್ದಳೇ ಸೀತೆ? ಆಕೆಯ ಒಡವೆಯಲ್ಲ ಆಕೆಗೆ ಒಪ್ಪಿದ್ದುದು; ಆಕೆ ಉಟ್ಟಿದ್ದ ನಾರು ಸೀರೆ. ನಿಮಗೂ ಖಾದೀ ಸೀರೆ ಒಪ್ಪಿದಷ್ಟು ಈ ಚೀನಾಂಬರ ಒಪ್ಪಲಾರವು'. ಅವರಿಗೆ ಒರಟು ಖಾದಿ ಕಂಡಷ್ಟು ಅಂದವಾಗಿ ಕಿನಕಾಪು ಬಟ್ಟೆಯೂ ಕಾಣದು. ಖಾದಿಯ ಎಳೆಗಳಲ್ಲಿ ಅವರಿಗೆ ವಿಧವೆಯೊಬ್ಬಳ ಕರುಣಕಥೆ ಕೇಳುತ್ತದೆ. ಅನಾಥೆಯೊಬ್ಬಳ ದೀನಚಿತ್ರ ಕಾಣುತ್ತದೆ. ದಿಕ್ಕಿಲ್ಲದ ಮುದುಕಿಯ ಹರಕೆಯ ಅನುಭವವಾಗುತ್ತದೆ. ಆ ಚಿತ್ತವೃತ್ತಿಗೆ ಅವಿದಿತ ವೇದ್ಯಾಂತರವಾದ ಏಕಸ್ಥಾಯಿ ಇದೆ. ಅದಕ್ಕೆ ಆನಂದ ಹೊರಗಣ ಪದಾರ್ಥಗಳಲ್ಲಿಲ್ಲ, ಒಳಗಣ ಭಾವನೆಯಲ್ಲಿದೆ. ಆನಂದವೆಂದರೆ ಸುಖವಲ್ಲ. ಸುಖ ಇಂದ್ರಿಯಭೋಗ್ಯವಾದುದು. ಆನಂದ ಆಧ್ಯಾತ್ಮಿಕವಾದುದು, ನಾಮರೂಪಗಳು ಸುಖದ ಸಾಮಗ್ರಿ, ಬಹು ಭೇದಗಳಿಂದ ಭಿನ್ನಭಿನ್ನವಾದ ಈ ಪ್ರಪಂಚದಲ್ಲಿ ಅಭೇದಾನುಭವದ ಆತ್ಮರತಿ ಆನಂದಸಾಮಗ್ರಿ, ಅದೇ ಆನಂದ.

'ಆದರೆ ತಲೆಗೆಲ್ಲಾ ಒಂದೇ ಮಂತ್ರವೇ? ರಾಯರೂ ರೈತರೂ ಇಬ್ಬರೂ ನೂಲಬೇಕೇ? ಎಲ್ಲರೂ ಸರಲತೆ ಸರಲತೆಯೆಂದರೆ ಸೌಂದರ್ಯ ಅಡವೀಪಾಲಾದೀತು. ಗಾಂಧೀಜಿಗೆ ಸರಲತೆಯ ಹುಚ್ಚು ಹಿಡಿದಿದೆ. ಅವರು ಗುಡಿಸಲು ಕಟ್ಟಿಕೊಂಡರೆ ನಾವೇಕೆ ನಮ್ಮ ಭವ್ಯ ಪ್ರಾಸಾದಗಳನ್ನು ಜರಿಯಬೇಕು. ಅವರು ಹಾಸಿಕೊಳ್ಳುವ ಈಚಲ ಚಾಪೆಯಿಂದ ಸಿಗುವ ಆನಂದ ಚಪ್ಪರಮಂಚದಲ್ಲಿ ಸಿಗಲಾರದೇನು? ಅವರ ಗುಡಿಸಲಿನ ಮಣ್ಣ ಮೆತ್ತಿದ ಗೋಡೆ, ಸಗಣಿ ಸಾರಿಸಿದ ನೆಲ, ಬೋಳು ಅಂಗಳ ಇವೇಯೇನು ನಮ್ಮ ಆದರ್ಶ? ಗೋಡೆಗೆ ನಾಲ್ಕು ಪಟ ತೂಗುಹಾಕಬಾರದೆ, ನಯವಾದ ರೇಸಿಮೆ ಉಡಬಾರದೆ, ರುಚಿಯಾಗಿ ಊಟ ಮಾಡಬಾರದೆ? ಬೇಲೂರಿನ ಗುಡಿಯತನಕ ಹೋಗಿ ಅಲ್ಲಿಯ ಸೊಬಗನ್ನು ಸವಿಯದೆ ಬರುವುದು ರಸಿಕತೆಯೆ? ಈ ತರದ ಬಾಳಿನಲ್ಲಿ ಕಲೆಗೇನು ಬೆಲೆಯಿದೆ?' ಹೀಗೆ ಎಷ್ಟೋ ಜನ ಕೇಳುತ್ತಾರೆ. ಅವರ ತುಂಡು ಪಂಜೆ, ಬಕ್ಕ ತಲೆ ನೋಡಿ 'ಗಾಂಧೀ ಬರೀಗೊಡ್ಡು, ನೀರಸ' ಎಂದಿದ್ದಾರೆ. 'ಗಾಂಧೀಜಿಗೂ